ಉತ್ತರ

ಅ) ಮಂಜೂರಾದ ಹುದ್ದೆಗಳು : ೪೩

ಆ) ೧೧ ಗ್ರಾಮ ಕರಣೀಕರ ಹುದ್ದೆಗಳು ಖಾಲಿ ಇವೆ. ಅವುಗಳು ೧) ಧರ್ಮಸ್ಥಳ (೨) ಬೆಳ್ತಂಗಡಿ, (೩) ಇಂದಬೆಟ್ಟು (೪) ಮೇಲಂತಬೆಟ್ಟು (೫) ಕುಕ್ಕೇಡಿ (೬) ತೆಕ್ಕಾರು (೭) ಅರಂಬೋಡಿ (೮) ಕೊಕ್ಕಡ (೯) ಇಳಂತಿಲ (೧೦) ಕುದ್ಯಾಡಿ (೧೧) ಹೊಸಂಗಡಿ

ಇ) ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅವಕಾಶವಿಲ್ಲದಿರುವುದರಿಂದ ಅನುಕಂಪದ ಆಧಾರದ ಮೇಲೆ ಹುದ್ದೆಗಳನ್ನು ತುಂಬಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೬೧ (೨೧೭೦)

ಸದಸ್ಯರ ಹೆಸರು : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ)

ಉತ್ತರಿಸುವವರು : ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಪ್ರಶ್ನೆ

ಅ) ೨೦೦೬–೦೭ನೇ ಸಾಲಿನಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಸಂಭವಿಸಿದ ಬೆಂಕಿ ಆಕಸ್ಮಿಕ ಮತ್ತು ನೈಸರ್ಗಿಕ ವಿಪತ್ತುಗಳ ಪ್ರಕರಣಗಳು ಎಷ್ಟು ?

ಆ) ಇದರಿಂದಾಗಿ ರೈತರುಗಳಿಗೆ. ಬಡವರಿಗೆ ಉಂಟಾದ ಹಾನಿಯನ್ನು ಸರ್ಕಾರ ಅಂದಾಜು ಮಾಡಲಾಗಿದೆಯೇ?

ಇ) ಹಾಗಿದ್ದಲ್ಲಿ, ಅದರ ಮೊತ್ತ ಎಷ್ಟು ?

ಈ) ರೈತರು ಬೆಳೆದ ಅಡಿಕೆ, ತೆಂಗು, ಮೆಣಸು, ಮುಂತಾದ ತೋಟಗಾರಿಕೆ ಬೆಳೆಗಳು ಅಗ್ನಿಗೆ ತುತ್ತಾದಾಗ ಬಡ ರೈತರಿಗೆ ಆ ನಷ್ಟವನ್ನು ಭರಿಸಲು ಸೂಕ್ತ ಪರಿಹಾರವನ್ನು ನೀಡಲು ಸರ್ಕಾರವು ತೆಗೆದುಕೊಳ್ಳುತ್ತಿರುವ ಕ್ರಮಗಳೇನು?

ಉತ್ತರ

ಅ) ೧.	ಬೆಂಕಿ ಆಕಸ್ಮಿಕದಿಂದ	೬
೨.	ಸಿಡಲಿನಿಂದ	೧೬
೩.	ಮಳೆಯಿಂದ	೧೩೭
	ಒಟ್ಟು	**೧೫೯**

ಆ) ಹೌದು

ಇ) ರೂ. ೧೦,೦೬,೮೭೦.೦೦

ಈ) ಪ್ರಕೃತಿ ವಿಕೋಪದಿಂದ ರೈತರ ಬೆಳೆದು ನಿಂತ ಪೈರುಗಳು ನಾಶ ಹೊಂದಿದ್ದಲ್ಲಿ ಅಂತಹ ರೈತರ ವಿವಿಧ ಬೆಳೆಗಳಿಗೆ ಕೆಳಕಂಡಂತೆ ಪರಿಹಾರ ನೀಡಲಾಗುತ್ತಿದೆ.

ಶೇ.೫೦ ಹಾಗೂ ಅದಕ್ಕಿಂತ ಹೆಚ್ಚಿಗೆ ನಷ್ಟವಾದಾಗ ಕೃಷಿ ಪರಿಕರಗಳಿಗೆ ಸಹಾಯಧನ

ಕೃಷಿ ಬೆಳೆಗಳು/ತೋಟಗಾರಿಕೆ ಬೆಳೆಗಳು ಮತ್ತು ವಾರ್ಷಿಕ ತೋಟದ ಬೆಳೆಗಳು	ಮಳೆ ಆಶ್ರಿತ ಪ್ರದೇಶಗಳಲ್ಲಿ ಪ್ರತಿ ಹೆಕ್ಟೇರ್ ಗೆ ರೂ. ೨೦೦೦/- ಖಾಯಂ ನೀರಾವರಿ ಪ್ರದೇಶ ದಲ್ಲಿ ಪ್ರತಿ ಹೆಕ್ಟೇರ್‌ಗೆ ರೂ. ೫೦೦೦/-

ಸಣ್ಣ ಮತ್ತು ಅತಿ ಸಣ್ಣ ರೈತರನ್ನು	ಮಳೆ ಆಶ್ರಿತ ಪ್ರದೇಶಗಳಲ್ಲಿ ಪ್ರತಿ ಹೆಕ್ಟೇರ್‌ಗೆ
ಹೊರತುಪಡಿಸಿ ಇತರ ರೈತರಿಗೆ	ರೂ. ೨೦೦೦/- ದರದಲ್ಲಿ
ಕೃಷಿ ಪರಿಕರಗಳಿಗೆ ಸಹಾಯಧನ	ನೀರಾವರಿ ಪ್ರದೇಶಗಳಲ್ಲಿ ಪ್ರತಿ ಹೆಕ್ಟೇರ್‌ಗೆ
ತೀವ್ರತೆರನಾದ ವಿಕೋಪದ ಪ್ರಕರಣದಲ್ಲಿ	ರೂ. ೫೦೦೦/- ದರದಲ್ಲಿ
ಭೂಮಿಯ ಪರಿಮಿತಿಯನ್ನು	ಬಹುವಾರ್ಷಿಕ ಬೆಳೆಗಳು ಪ್ರತಿ ಹೆಕ್ಟೇರ್‌ಗೆ
ಪರಿಗಣಿಸದೇ ಸಹಾಯಧನವನ್ನು	ರೂ. ೮೦೦೦/- ದರದಲ್ಲಿ
ಗರಿಷ್ಟ ೨ ಹೆಕ್ಟೇರ್ ವರೆಗೆ ಸೂಕ್ತ	
ದರದಲ್ಲಿ ಪಾವತಿ ಮಾಡುವುದು.	
ಬಹುವಾರ್ಷಿಕ ಬೆಳೆಗಳು	ಹೆಕ್ಟೇರ್ ಒಂದಕ್ಕೆ ರೂ.೮೦೦೦/- ರಂತೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೪೬೨ (೨೨೧೯)

ಸದಸ್ಯರ ಹೆಸರು : ಶ್ರೀ ರಮೇಶ್ ಕುಮಾರ್ (ಶ್ರೀನಿವಾಸಪುರ)

ಉತ್ತರಿಸುವವರು : ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು)

ಪ್ರಶ್ನೆ

ಅ) ಶ್ರೀನಿವಾಸಪುರ ತಾಲ್ಲೂಕಿನ ಜಲಗೊಂಡನಹಳ್ಳಿ ಹೊಸ ಕೆರೆಯಿಂದ ನೆರೆಯ ಆಂಧ್ರಪ್ರದೇಶಕ್ಕೆ ವ್ಯರ್ಥವಾಗಿ ನೀರು ಹರಿದು ಹೋಗುತ್ತಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕೆರೆಯ ಏರಿಯನ್ನು ಅಗಲಪಡಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿ ಬಲಪಡಿಸಿ ಕೆರೆಯಲ್ಲಿ ಹೆಚ್ಚುವರಿ ನೀರು ಶೇಖರಣೆ ಮಾಡಿ ಬರಗಾಲ ಪೀಡಿತ ಸ್ಥಳೀಯ ಪ್ರದೇಶಕ್ಕೆ ಅನುಕೂಲ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಈ ಕೆರೆಯನ್ನು ಸರಣಿಯ ಅಂತಿಮ ಕೆರೆ ಎಂದು ಪರಿಗಣಿಸಿ ಈ ಕೆರೆಯಲ್ಲಿ ಗರಿಷ್ಟ ಪ್ರಮಾಣದ ನೀರನ್ನು ಶೇಖರಣೆ ಮಾಡಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ?